
ಪ್ರಾರ್ಥನಾ ಮಂದಿರ

# ಅನಾಸಕ್ತಿ ಆಶ್ರಮ
## ಪ್ರಕೃತಿಯ ನಡುವೆ ಗಾಂಧಿ ಧ್ಯಾನ

**ಕೌಸಾನಿಯ ಸುಂದರ ಪ್ರಕೃತಿಯ ಮಡಿಲಿನಲ್ಲಿರುವ 'ಅನಾಸಕ್ತಿ ಆಶ್ರಮ' ಗಾಂಧಿ ನೆನಪುಗಳನ್ನು ಉಸುರುವ ತಾಣವೂ ಹೌದು. ಗಾಂಧೀಜಿಯ ತತ್ವಗಳನ್ನು ಧ್ಯಾನಿಸುತ್ತಾ ಕುಳಿತಂತೆ ಕಾಣುವ ಈ ಆಶ್ರಮ ಆಧ್ಯಾತ್ಮಿಕ ಅನ್ವೇಷಣೆಗೆ ದಾರಿಯನ್ನೂ ತೆರೆಯುತ್ತದೆ.**

■ ಜಿ.ಆರ್. ಪಂಡಿತ್, ಸಾಗರ

ಉತ್ತರಾಖಂಡ ರಾಜ್ಯದ ಹಿಮಾಲಯದ ಮಡಿಲು ಕೌಸಾನಿ ತನ್ನ ಪ್ರಕೃತಿ ಸೌಂದರ್ಯಕ್ಕೆ ಮಾತ್ರವಲ್ಲ, ಮತ್ತೂ ಒಂದು ಕಾರಣಕ್ಕೆ ವಿಶೇಷವೆನಿಸಿದೆ. ರಾಷ್ಟ್ರಪಿತ ಗಾಂಧಿಯ ನೆನಪುಗಳನ್ನು ಮೆಲುಕು ಹಾಕುವ ಇಲ್ಲಿನ 'ಅನಾಸಕ್ತಿ ಆಶ್ರಮ' ಬಾಪುವಿನ ಅಧ್ಯಾತ್ಮದ ಅನ್ವೇಷಣೆಗೂ ಒಂದು ನಿದರ್ಶನವಾಗಿ ನಿಂತಿದೆ. ಈ ಆಶ್ರಮಕ್ಕೆ 'ಗಾಂಧಿ ಆಶ್ರಮ' ಎಂಬ ಹೆಸರಿದೆ.

ಸಾಂತ್ವನ ಮತ್ತು ಪ್ರಕೃತಿಯೊಂದಿಗೆ ತಾದ್ಯಾತ್ಮತೆ ಬಯಸುವವರಿಗೆ ಇದು ನೆಮ್ಮದಿಯ ಸ್ವರ್ಗ. ಜೊತೆಗೆ, ಗಾಂಧಿಯ ಸ್ಮೃತಿಗಳನ್ನು ಕಣ್ಮುಂದೆ ತರುವ ತಾಣವೂ ಹೌದು.

ಮಹಾತ್ಮ ಗಾಂಧಿಯವರೊಂದಿಗೆ ನಿಕಟ ಸಂಬಂಧ ಹೊಂದಿರುವ ಈ 'ಅನಾಸಕ್ತಿ ಆಶ್ರಮ', ಗಾಂಧೀಜಿ 1929ರಲ್ಲಿ ಎರಡು ವಾರಗಳ ಕಾಲ ಕೌಸಾನಿಯಲ್ಲಿ ತಂಗಿದ್ದುದರ ನೆನಪಿಗಾಗಿ ನಿರ್ಮಾಣಗೊಂಡ ಭವನ. ಗಾಂಧೀಜಿಯವರು ತಮ್ಮ ಪುಸ್ತಕ 'ಅನಾಸಕ್ತಿ ಯೋಗ'ವನ್ನು ಇಲ್ಲಿಯೇ ಕುಳಿತು ರಚಿಸಿದ್ದಾರೆ.

ಗಾಂಧಿಯವರ ಹೃದಯಕ್ಕೆ ಪ್ರಿಯವಾದ ಅಬಾಂಧವ್ಯದ ತತ್ವವೇ ಈ ಆಶ್ರಮಕ್ಕೆ 'ಅನಾಸಕ್ತಿ ಆಶ್ರಮ' ಎಂಬ ಹೆಸರು ಬರಲು ಕಾರಣವಾಯಿತು. ಸ್ವಾತಂತ್ರ್ಯ ಚಳವಳಿಯ ಹೋರಾಟ, ದೇಶದಾದ್ಯಂತ ಮಾಡಿದ ಪ್ರಯಾಣದಿಂದಾಗಿ ಬಸವಳಿದ ಗಾಂಧಿಯವರಿಗೆ ಈ ಆಶ್ರಮ, ತಮ್ಮ ಅಹಿಂಸೆ, ಸತ್ಯಾಗ್ರಹ, ಸ್ವಾವಲಂಬನೆಯ ತತ್ವಗಳನ್ನು ಪ್ರತಿಬಿಂಬಿಸಲು, ಧ್ಯಾನಿಸಲು ಮತ್ತು ಆಲೋಚಿಸಲು ಅವಕಾಶ ಮಾಡಿಕೊಟ್ಟಿತ್ತು.

ಕೌಸಾನಿಯ ಸುಂದರ ಪ್ರಕೃತಿಯ ಮಡಿಲಲ್ಲಿ ತಲೆ ಎತ್ತಿದ ಈ ಆಶ್ರಮ ಸಮುದ್ರ ಮಟ್ಟದಿಂದ ಸುಮಾರು 6075 ಅಡಿ ಎತ್ತರದಲ್ಲಿದೆ. ಆಶ್ರಮದ ಎದುರು ತ್ರಿಶೂಲ, ನಂದಾದೇವಿ ಮತ್ತು ಪಂಚೋಲಿ ಸೇರಿದಂತೆ ಹಿಮಾಲಯ ಶಿಖರಗಳ ವಿಹಂಗಮ ನೋಟ, ದಟ್ಟವಾದ ಪೈನ್ ಕಾಡುಗಳು, ಕೋಸಿ ನದಿಯ ಸೌಮ್ಯ ಹರಿವು ಈ ಸ್ಥಳದಲ್ಲಿನ ಪ್ರಶಾಂತ ಧ್ಯಾನಸ್ಥ ವಾತಾವರಣಕ್ಕೆ ಕಾರಣವಾಗಿವೆ.


ಅನಾಸಕ್ತಿ ಆಶ್ರಮ

ಆಶ್ರಮದ ವಾಸ್ತುಶಿಲ್ಪ ಅತ್ಯಂತ ಸರಳವಾಗಿದೆ. ಪ್ರಶಾಂತ ಉದ್ಯಾನ, ಸುತ್ತಲಿನ ನೈಸರ್ಗಿಕ ಸೌಂದರ್ಯ, ಹಿಮಾಚ್ಛಾದಿತ ಪರ್ವತಗಳ ಅದ್ಭುತ ನೋಟ ಆಶ್ರಮಕ್ಕೊಂದು ಗಾಂಭೀರ್ಯ ತಂದುಕೊಟ್ಟಿವೆ. ಇಲ್ಲಿ ಪ್ರತಿದಿನ ಪ್ರಾರ್ಥನೆಗಳು, ಧ್ಯಾನ ಮತ್ತು ಗಾಂಧೀಜಿಯವರ ಬೋಧನೆಗಳ ಚರ್ಚೆಗಳು ನಡೆಯುತ್ತವೆ. ಇದು ಪ್ರಪಂಚದಾದ್ಯಂತ ಇರುವ ಆಧ್ಯಾತ್ಮಿಕ ಅನ್ವೇಷಕರಿಗೆ, ಆಂತರಿಕ ಶಾಂತಿಯನ್ನರಸುವವರಿಗೆ ಸೂಕ್ತ ಸ್ಥಳ. ಪ್ರವಾಸಿಗರಿಗೂ ಇಲ್ಲಿನ ದೈನಂದಿನ ಚಟುವಟಿಕೆಗಳಲ್ಲಿ ಭಾಗವಹಿಸುವ ಅವಕಾಶವಿದೆ. ಪ್ರಶಾಂತ ಪರಿಸರದಲ್ಲಿ ಉಳಿಯಬಯಸುವವರಿಗೆ ವಸತಿ ಸೌಕರ್ಯ ಮತ್ತು ಭೋಜನದ ವ್ಯವಸ್ಥೆ ಕೂಡ ಇದೆ.

ಆಶ್ರಮದಲ್ಲಿ ಗಾಂಧೀಜಿಯವರ ಜೀವನ ಮತ್ತು ತತ್ವಶಾಸ್ತ್ರದ ಪುಸ್ತಕಗಳ ಗ್ರಂಥಾಲಯ ಇದೆ. ಇದು ವಿದ್ವಾಂಸರು ಮತ್ತು ಇತಿಹಾಸಪ್ರಿಯರಿಗೆ ಅಮೂಲ್ಯ ಸಂಪನ್ಮೂಲ. ಈ ಸಮುಚ್ಚಯದಲ್ಲಿ ಪ್ರಾರ್ಥನಾ ಮಂದಿರ, ಸರಳಾ ಬೆನ್ ಮತ್ತು ಲಕ್ಷ್ಮೀ ಬೆನ್ ನೆನಪಿನ ವಸ್ತು ಸಂಗ್ರಹಾಲಯ ಇದೆ. ಇಂದು ಈ ಅನಾಸಕ್ತಿ ಆಶ್ರಮ ಗಾಂಧೀಜಿಯವರ ತತ್ವಶಾಸ್ತ್ರ ಮತ್ತು ಅವರ ಸ್ವತಂತ್ರ–ಸ್ವಾವಲಂಬಿ ಭಾರತದ ದೃಷ್ಟಿಕೋನಗಳನ್ನು ಬಿಂಬಿಸುವ, ಅವರ ನೆನಪು ಮತ್ತು ಬೋಧನೆಗಳನ್ನು ಸಂರಕ್ಷಿಸುವ ಐತಿಹಾಸಿಕ ಮಹತ್ವದ ಸ್ಥಳವಾಗಿದೆ.

ನಿಸರ್ಗ ಸೌಂದರ್ಯದ ಜೊತೆಜೊತೆಗೆ ಗಾಂಧಿ ಚಿಂತನೆಗಳನ್ನು ಮನನ ಮಾಡಲು, ಆ ಮೂಲಕ ಆತ್ಮಾವಲೋಕನ ಮಾಡಿಕೊಳ್ಳಲು ಕೌಸಾನಿ ಅತ್ಯಂತ ಪ್ರಶಸ್ತ ಹಾಗೂ ಸುಂದರ ಸ್ಥಳ.

ಪ್ರತಿಕ್ರಿಯಿಸಿ: feedback@sudha.co.in